ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 446/2018
ಪಿ ಡಬ್ಲುಃ 1
ಸಿ ಡಬ್ಲುಃ 1

| | |
|---|---|
| ಸಾಕ್ಷಿದಾರರ ಹೆಸರು | ಉಮರ್ ಇಸ್ಮಾಯಿಲ್ ಶೇಖ್ |
| ತಂದೆಯ ಹೆಸರು | ಇಸ್ಮಾಯಿಲ್ ಶೇಖ್ |
| ವಯಸ್ಸು | 50 |
| ಉದ್ಯೋಗ | ಮೀನುಗಾರಿಕೆ |
| ವಾಸ್ತವ್ಯ | ಕಸಬಾ, ಗುಂಡಿಬೈಲ್, ಹೊನ್ನಾವರ |

ಸಾಕ್ಷಿಯನ್ನು ದಿನಾಂಕ : 02-03-2021 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನನಗೆ ಆರೋಪಿತರ ಪರಿಚಯವಿದೆ. 1 ನೇ ಆರೋಪಿ ನನ್ನ ಅಣ್ಣ. 2 ಮತ್ತು 3 ನೇ ಆರೋಪಿತರು ಅಣ್ಣನ ಮಕ್ಕಳು. ಆರೋಪಿ ಕುಟುಂಬದವರು ಹಾಗೂ ನಮ್ಮ ಕುಟುಂಬದವರು ಒಂದೇ ಮನೆಯಲ್ಲಿ 2 ಭಾಗ ಮಾಡಿಕೊಂಡು ವಾಸ ಮಾಡುತ್ತಿದ್ದೇವೆ . ಆರೋಪಿತರು ನಮ್ಮ ಮನೆಯ ಎಡಭಾಗದಲ್ಲಿ ವಾಸವಾಗಿದ್ದಾರೆ. ಮನೆಯ ಮೇಲ್ಛಾವಣಿ ರಿಪೇರಿ ಮಾಡುವ ವಿಷಯದಲ್ಲಿ ನಮಗೂ ಅವರಿಗೂ ತಕರಾರು ನಡೆಯುತ್ತಿದೆ. ದಿಃ 25.04.2017 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಆರೋಪಿತರು ಮನೆಯ ಚಾವಣಿಯ ಕೆಲಸ ಮಾಡುತ್ತಿದ್ದರು. ಅವರು ಮೊದಲಿದ್ದ ಹಂಚನ್ನು ತೆಗೆದು ತಗಡನ್ನು ಹಾಕುತ್ತಿದ್ದರು . ಆಗ ನಾನು ಕೋರ್ಟಿನಲ್ಲಿ ದಾವೆ ಮಾಡಿದ್ದು ಆ ದಾವೆ ಇನ್ನೂ ವಿಚಾರಣೆಗೆ ಬಾಕಿ ಇದೆ ಹಾಗಾಗಿ ಇಲ್ಲಿ ಕೆಲಸ ಮಾಡಬೇಡಿ ಎಂದು ಹೇಳಿದೆ. ಆದರೆ ಆರೋಪಿತರು ನನ್ನ ಮಾತನ್ನು ಕೇಳದೆ ನನ್ನನ್ನು ಅವಾಚ್ಯ ಶಬ್ದಗಳಿಂದ ಬೋಳಿ ಮಗನೇ, ಸೂಳೆ ಮಗನೇ, ಮಾದರ್ ಚೋದ್, ಚೆನಾಲ್ ಕೆ ಅಂತ ಬೈದರು. 2 ಮತ್ತು 3 ನೇ ಆರೋಪಿತರು ಕಲ್ಲು ತೆಗೆದುಕೊಂಡು ನನಗೆ ಹೊಡೆದರು . 1 ನೇ ಆರೋಪಿ 2 ಮತ್ತು 3 ನೇ ಆರೋಪಿತರನ್ನು ಪ್ರಚೋದಿಸಿ ನನ್ನನ್ನು ಹೊಡೆಯುವಂತೆ ಹೇಳುತ್ತಿದ್ದರು . 2 ಮತ್ತು 3 ನೇ ಆರೋಪಿತರು ಕಲ್ಲಿನಿಂದ ನನ್ನ ತಲೆ, ಭುಜ ಹಾಗೂ ಮರ್ಮಾಂಗಕ್ಕೆ ಹಲ್ಲೆ ಮಾಡಿದರು. ಅವರು ಹಲ್ಲೆ ಮಾಡಿದ್ದರಿಂದ ನಾನು ಪ್ರಜ್ಞೆ ತಪ್ಪಿ ಬಿದ್ದೆ. ಆ ನಂತರ ಆಸ್ಪತ್ರೆಗೆ ಹೋಗುವ ತನಕ ಏನಾಯಿತು ಎಂದು ನನಗೆ ಗೊತ್ತಿಲ್ಲ . ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಪ್ರಜ್ಞೆ ಬಂತು . ನನ್ನನ್ನು ಹೊಡೆಯುವಾಗ ಆರೋಪಿತರು ನಿನ್ನನ್ನು

ಕೊಲ್ಲುತ್ತೇವೆ ಹಾಗೂ ಮನೆಯವರೆಲ್ಲರನ್ನೂ ಕೊಲ್ಲುತ್ತೇವೆ ಎಂದು ಬೆದರಿಕೆ ಹಾಕಿದರು . ನನ್ನನ್ನು ಪೋಲೀಸರು ಸೇಂಟ್ ಇಗ್ನೇಶಿಯಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಪೋಲೀಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ತೆಗೆದುಕೊಂಡರು. ನಾನು ಪೋಲೀಸರಿಗೆ ಹೇಳಿಕೆದೂರು ನೀಡಿರುತ್ತೇನೆ . ನಾನು ನನ್ನ ಹೇಳಿಕೆ ದೂರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಹೇಳಿಕೆದೂರನ್ನು ತೋರಿಸಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿ ನಿಪಿ 1ಎ ಎಂದು ಗುರುತಿಸಲಾಯಿತು. ಸೇಂಟ್ ಇಗ್ನೇಶಿಯಸ್ ಆಸ್ಪತ್ರೆಯಲ್ಲಿ 1 ದಿನ ಚಿಕಿತ್ಸೆ ಪಡೆದುಕೊಂಡು ನಂತರ ಹೊನ್ನಾವರ ಸರ್ಕಾರಿ ಆಸ್ಪತ್ರೆಯಲ್ಲಿ 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದೆನು. ನಂತರ ಕುಂದಾಪುರ ಆಸ್ಪತ್ರೆಯಲ್ಲೂ ಕೂಡ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲುಗಳನ್ನು ನೋಡಿದರೆ ಗುರುತಿಸಬಲ್ಲೆ . ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಕಲ್ಲುಗಳನ್ನು ತೋರಿಸಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ಎಂ ಒ 1 ರಿಂದ 3 ಎಂದು ಗುರುತಿಸಲಾಯಿತು.

ಘಟನೆಯಾದ 15 ದಿನಗಳ ನಂತರ ನಾನು ನನ್ನ ಮತ್ತೊಬ್ಬ ಅಣ್ಣ ಹುಸೇನ್ ಶೇಖ್ ಹುಸೇನ್ ಖಾದ್ರಿ ರವರ ಬಳಿ ಹೋಗಿ ಘಟನೆ ಬಗ್ಗೆ ತಿಳಿಸಿದೆನು. ಆಗ ಅವರು ನಮ್ಮ ಮನೆಗೆ ಅಳವಡಿಸಿದ ಸಿ ಸಿ ಕ್ಯಾಮರಾದಲ್ಲಿ ಆರೋಪಿತರು ಹಲ್ಲೆ ಮಾಡಿರುವ ದೃಶ್ಯಾವಳಿ ರೆಕಾರ್ಡ ಆಗಿದೆಯಾ ನೋಡೋಣ ಎಂದು ಹೇಳಿದರು. ನಾವು ಸಿ ಸಿ ಕ್ಯಾಮರಾ ನೋಡಿದಾಗ ಅದರಲ್ಲಿ ಆರೋಪಿತರು ಹಲ್ಲೆ ಮಾಡಿರುವುದು ರೆಕಾರ್ಡ ಆಗಿತ್ತು. ಅದರ ಕಾಪಿ ಯನ್ನು ಪೋಲೀಸರಿಗೆ ಕೊಟ್ಟಿದ್ದೆವು. ಅದನ್ನು ಪೋಲೀಸರು ಹಾಜರುಪಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ . ನನ್ನ ಬಳಿ ಅದರ ಕಾಪಿ ಇದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯು ಸಿ ಸಿ ಕ್ಯಾಮರಾ ಫೂಟೇಜ್ ಇರುವ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಾಗಿ ಹೇಳಿದ್ದರಿಂದ ಸ ಸ ಅ ರವರು ಕಲಂ 242(2) ಸಿ ಆರ್ ಪಿ ಸಿ ಅಡಿ ಅರ್ಜಿ ಸಲ್ಲಿಸಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/–

ಪ್ರಧಾನ ಪ್ರ ದ ನ್ಯಾದಂ ಹೊನ್ನಾವರ.